(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಕಾನೂನು ಮಾಡುವುದಕ್ಕೆ ಮುನ್ನುದೆಯನ್ನು ತಂದರು. ಈ ವಿಷಯದಲ್ಲಿ ಪರಿಶೀಲನೆ ನಡೆಸಲು ಒಂದು ಸಮಿತಿಯನ್ನು ಮಾಡಿ ಆ ಸಮಿತಿಯ ವರದಿಯನ್ನೇನಾದರೂ ತರಿಸಿಕೊಂಡರೆ? ರಾಜ್ಯದ ಮಟ್ಟದಲ್ಲಿ ಒಂದು ಸಮಿತಿ ಮಾಡಿ ಅವರಿಂದ ವರದಿ ಕೇಳಿದರೆ? ಕೇಂದ್ರ ಸರ್ಕಾರದವರು ಹೇಳಿದುದನ್ನು ವಿಚಾರ ಮಾಡದೆ ಹಾಗೆ ಒಪ್ಪಿಕೊಂಡರೆ ಹೇಗೆ? ಒಳ್ಳೆಯ ವಿಷಯದಲ್ಲಿ ಕೇಂದ್ರ ಸರ್ಕಾರದವರು ಏನು ಮಾಡಬೇಕೆಂದು ಹೇಳಿದರೋ ಆ ಕೆಲಸವನ್ನು ಮಾಡುವುದರಲ್ಲಿ ನಮ್ಮ ಸರ್ಕಾರದವರು ನೂರಕ್ಕೆ ನೂರರಷ್ಟು ಹಿಂದೆ ಸರಿದರು ಎಂದ ಮೇಲೆ ಜನರಿಗೆ, ರೈತರಿಗೆ ಅನ್ಯಾಯವಾಗುವ, ರೈತರನ್ನು ಕಷ್ಟಕ್ಕೆ ಸಿಕ್ಕಿಸುವ ಇಂಥ ಕಾನೂನನ್ನು ತಂದು ಇದನ್ನು ಕಾನೂನಿನ ಕಡತಕ್ಕೆ ಸೇರಿಸುವುದಕ್ಕೆ ಏಕೆ ಪ್ರಯತ್ನ ಮಾಡುತ್ತಿದ್ದಾರೆ?

ಒಬ್ಬ ಸದಸ್ಯರು.—ಇದರಿಂದ ರೈತರಿಗೆ ಹೇಗೆ ಅನ್ಯಾಯವಾಗುತ್ತದೆ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—58 ಸೇರನ್ನು ಕೊಂಡುಕೊಂಡರೆ 52 ಸೇರನ್ನು ತುಂಬಿರುತ್ತಾನೆ ವ್ಯಾಪಾರಸ್ಥ. ರೆಗ್ಯುಲೇಟೆಡ್ ಮಾರ್ಕೆಟ್‌ನಲ್ಲಿ ಅವರಿಗೆ ಅನ್ಯಾಯವಾಗುತ್ತದೆ. ಈಗಿರುವ ಪದ್ಧತಿಯಲ್ಲಿ ಏನು ಅನಾನುಕೂಲವಾಗಿದೆ ಎನ್ನುವುದನ್ನು ಹೇಳಬೇಕು, ಹೀಗೆ ಹೇಳುವುದಕ್ಕೆ ಸರ್ಕಾರಕ್ಕೆ ಧೈರ್ಯ ಏರಬೇಕು. ಕಾನೂನನ್ನು ಸಮನ್ಯಯ ಮಾಡಬೇಕು, ಒಳ್ಳೆಯ ಸುಧಾರಣೆಗಳನ್ನು ತರಬೇಕು; ಹೀಗೆ ಮಾಡಬೇಕಾದರೆ ದೇಶದಲ್ಲಿ ಒಳ್ಳೆಯ ಕೆಲಸ ಮಾಡಬೇಕು, ಒಳ್ಳೆಯ ಕಾನೂನುಗಳನ್ನು ಮಾಡಬೇಕು, ದೇಶಕ್ಕೆ ಕೆಟ್ಟದಾಗುವ ಕಾನೂನುಗಳನ್ನು ಶಾಸನ ಕಡತದಿಂದ ಕತ್ತುಹಾಕಬೇಕು, ಎಂದು ಹೇಳುವಾಗ ಭೂಸುಧಾರಣೆಯನ್ನು ಜಾರಿಗೆ ತರಬೇಕೆಂದರೆ ಆಡಳಿತ ಪಕ್ಷದಲ್ಲಿ ಎಷ್ಟು ಕಷ್ಟವಾಯಿತು! Priority of Legislation . . . .

Sri T. D. MARANNA.—How is it relevant?

Sri C. J. MUCKANNAPPA.—We have to consider priority of legislation, which is to be implemented, how the people at large are to benefit, not by means of this legislation introducing metric system of weights and measures. My friend should wait and see what I have got to say. ದೇಶದಲ್ಲಿ ಇನ್ನೂ ಮಾಡಬೇಕಾಗಿರುವ ಎಷ್ಟೋ ಮುಖ್ಯವಾದ ಕೆಲಸಕಾರ್ಯಗಳಿರುವಾಗ ಈ ಮುನೂದೆಯನ್ನು ತಂದು ಈ ಸಭೆಯಲ್ಲಿ ಅವಸರವಾಗಿ ಒಂದು ಅಥವಾ ಒಂದೂವರೆ ಗಂಟೆಯೊಳಗೆ ಅಂಗೀಕಾರ ಪಡೆಯುವ ಅಗತ್ಯವೇ ನಿತ್ತು?

ಅಧ್ಯಕ್ಷರು.—ಕಾಲವನ್ನು ಗೊತ್ತು ಮಾಡಿರುವವರು ಸರ್ಕಾರದವರಲ್ಲ. ಇದರ ಚರ್ಚೆಗೆ ಒಂದೂವರೆ ಗಂಟೆಕಾಲವೆಂದು ಗೊತ್ತುಮಾಡಿರುವುದು ಈ ಸಭೆ. ಅವರ ತಪ್ಪಲ್ಲ, ನಮ್ಮ ತಪ್ಪೆಂದು ಹೇಳಿ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಮ್ಮ ತಪ್ಪೆಂದೇ ಒಪ್ಪೋಣ, ದೇಶಕ್ಕೆ ಅಗತ್ಯವಾದ ಒಳ್ಳೊಳ್ಳೆಯ ಸುಧಾರಣೆಗಳನ್ನು ಮಾಡುವುದು ಬಿಟ್ಟು ಖಾದಿ ಬೋರ್ಡ್, ಕುಶಾರ್ ಕೈಗಾರಿಕೆ, ಹ್ಯಾಂಡ್‌ಲೂಮ್ ಬೋರ್ಡ್ ಇಂಥಾದ್ದನ್ನು ಮಾಡಿಕೊಂಡು ಕುಳಿತಿದ್ದಾರೆ.

ಅಧ್ಯಕ್ಷರು.—ಕುಶಾಲ್ ಕೈಗಾರಿಕೆಯಾವುದು?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕುಶಾಲು, ಕುಶಲ ಎರಡೂ ಒಂದೇ (ನಗು!)

ಆದುದರಿಂದ ಸರ್ಕಾರಕ್ಕೆ ನಾನು ಇಷ್ಟು ಹೇಳುತ್ತೇನೆ. ನಿಮ್ಮಲ್ಲಿ ಪ್ರಗತಿಗಾಮಿ ಮನೋಭಾವ ವಿದ್ದರೆ, ದೇಶವನ್ನು ಮುಂದೆ ತೆಗೆದುಕೊಂಡು ಹೋಗಬೇಕೆಂಬ ಬಯಕೆಯಿದ್ದರೆ, ಇಂಥ ಮುನೂದೆಯನ್ನು ನಮ್ಮ ಮುಂದೆ ತಂದು ಇದನ್ನು ಚರ್ಚೆಮಾಡಿ ಅಭಿಪ್ರಾಯಕೊಡಿ ಎಂದು ಕೇಳುವುದಕ್ಕೆ ಬದಲು ದೇಶದಲ್ಲಿ ಜನರಿಗೆ ಯಾವುದರಿಂದ ಒಳ್ಳೆಯದೋ, ಯಾವುದರಿಂದ ಬಡವರಿಗೂ ಕೂಲಿಗಾರರಿಗೂ ಒಳ್ಳೆಯದೋ ಅಂಥ ಸುಧಾರಣೆಗಳನ್ನು ತನ್ನಿ. ಅದು ಬಿಟ್ಟು ಕೇಂದ್ರ ಸರ್ಕಾರದವರು ಹೇಳಿದ್ದಾರೆಂದು ಇಂಥಾದ್ದನ್ನು ತರಬೇಡಿ. ಅದೂ ಅಲ್ಲದೆ ಇದೇನೂ ಸಣ್ಣ ಮುನೂದೆಯಲ್ಲ, ಇದರಲ್ಲಿ 17 ಪುಟಗಳಿವೆ. 37 ಲಕ್ಷ ರೂಪಾಯಿ ಖರ್ಚಾಗುತ್ತದೆ.

> "The financial implications in bringing out the new legislation of Weights and Measures involves an additional non-recurring expenditure of Rs. 37 lakhs and a recurring expenditure of Rs. 5,45,255. The recurring expenditure includes the present expenditure of Rs. 3,49,259 on the existing staff."

ಹೀಗಿರುವಾಗ ಇದು ನನಗೆ ಅರ್ಥವಾಗುವುದಿಲ್ಲ. ಏಕೆ ಇಷ್ಟು ಆತುರ? ದಿಢೀರೆನ್ನು ಅವರಿಗೆ? ದೇಶಕ್ಕೆ ಒಳ್ಳೆಯದಾಗುವುದಾದರೆ ಸರ್ಕಾರ ಏಕೆ ಭಯ ಪಡಬೇಕು?

ಅಧ್ಯಕ್ಷರು.—ಇದು ಈಗಾಗಲೇ 35 ನಿಮಿಷ ಚರ್ಚೆಯಾಗಿದೆ. ಇನ್ನು 25 ನಿಮಿಷ ಇವೆ. ಹೆಚ್ಚು ಜನ ಮಾತನಾಡಲು ಅವಕಾಶ ಕೊಡುವುದಕ್ಕಾಗುವುದಿಲ್ಲ. ಶ್ರೀ ಮುಕ್ಕಣಪ್ಪನವರು ಜಾಗ್ರತೆ ಮುಗಿಸಿದರೆ ಇನ್ನೊಬ್ಬರಿಗೆ ಅವಕಾಶ ಕೊಡಬಹುದು, ಮಂತ್ರಿಗಳಿಗೆ ಹತ್ತು ನಿಮಿಷ ಬೇಕು. ಇನ್ನು ನಾಲ್ಕೈದು ನಿಮಿಷ ದವ್ವಾದರೂ ಮುಕ್ಕಣಪ್ಪನವರು ಮುಗಿಸಿದರೆ ಇನ್ನೊಬ್ಬರಿಗೆ ಅವಕಾಶ ಕೊಡಲು ಸಾಧ್ಯ. ಇಲ್ಲದಿದ್ದರೆ ಆಗುವುದಿಲ್ಲ.

The House will now rise for Lunch and meet after half an hour.

The House adjourned for Lunch at Three of the Clock and reassembled at Thirty Minutes past Three of the Clock.

Slogans in the House.

Mr. SPEAKER.—Before we start discussion, I have to announce my decision about the slogan that was uttered in this House by the Hon'ble Member Sri Samaji. I have decided

not only to expunge it but also to erase it from the records. I am of the opinion that members should not use this House for uttering slogans. After all, there is sanctity attached to this House and that sanctity should in no case be violated by any member of the House I am, therefore, requesting the Hon'ble Member Sri Samaji not to repeat such a performance here. He will also convey on my behalf to every member of the Samyuktha Maharashtra Samiti that I except every member of this House to behave in consonance with the dignity and decorum of this House.

Sri K. PUTTASWAMY (Mysore).—I amnot able to understand what is meant by 'erasing'. We are accustomed to 'expunction'.

Mr. SPEAKER.—By expunging the slogan what happens is, even though the slogan will not be there it will be indicated that it has been expunged. By erasing there will be nothing on record.

Sri K. PUTTASWAMY:—Not that I am disputing the ruling of the Chair. After all, any ruling givenby the Chair will be a precedent for the future. If something is erased, we will not be able to know what has been erased.

Mr. SPEAKER.—That is exactly the purpose why it is erased.

[Sri N. O. Samaji spoke a few words in Marathi to which Mr. Speaker replied in Marathi.]

Sri A. V. NARASIMHA REDDY (Bangalore South).—I rise to a point of order. The Chair gave a ruling but he seems to be questioning that ruling and is going on speaking on the matter which is concluded.

Mr. SPEAKER.—He is not questioning the ruling of the Chair. He wants to understand how this question is to be solved. I told him there were methods by which this question could be solved, *i.e.*, by means of a motion or tabling a question in this House or some other method which is in consonance with our Rules of Procedure. I also told him that he could not utter slogans in this House and that if he wanted to raise this question in this House he could take recourse to other methods.

MYSORE WEIGHTS AND MEASURES (ENFORCEMENT) BILL, 1958.

Motion to consider (contd.)

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಸ್ವಾಮಿ, ನಾನು ಈ ವೇಟ್ಸ್ ಅಂಡ್‌ಮೇಝುರ್ಸ್ ಬಿಲ್ಲನ್ನು ವಿರೋಧಮಾಡಿ ಮಾತನಾಡುತ್ತಾ ಇದ್ದೇನೆ. ಈ ಮಸೂದೆಯನ್ನು ತಂದಿರತಕ್ಕದ್ದು ಸರಿಯಾಗಿಲ್ಲ, ನೀವು ಪ್ರಗತಿ ಮನೋಭಾವದಿಂದ ಕೂಡಿರತಕ್ಕಂಥ ಮಸೂದೆಯನ್ನು ತೆಗೆದುಕೊಂಡು ಬಂದಿಲ್ಲ, ಇದು ಪ್ರತಿಗಾಮಿಯಾಗಿದೆ ಎಂದು ನಾನು ಹೇಳುತ್ತೇನೆ. ನಮಾಜದ ಮೇಲೆ ಪ್ರತಿಗಾಮಿ ಪರಿಣಾಮವಾದ ತಕ್ಕಂಥಾದ್ದು ಇದಾಗಿದೆ. ಜನತೆಗೆ ತೊಂದರೆಯುಂಟಾಗುತ್ತದೆ. ಅದಕ್ಕೋಸ್ಕರವಾಗಿ ಈಗ ಅನುಸರಿಸುತ್ತಿರುವ ಮಾರ್ಗ ಸರಿಯಾಗಿಲ್ಲ. ಅದುದರಿಂದ ಈ ಬಿಲ್ಲನ್ನು ವಾಪಸ್ ತೆಗೆದುಕೊಳ್ಳಬೇಕೆಂದು ಈ ಮೂಲಕ ನಾನು ತಿಳಿಸಲಿಚ್ಛಿಸುತ್ತೇನೆ. ಕೇಂದ್ರ ಸರಕಾರದ ಆ ದೇಶಕ್ಕೆ ಅನುಸಾರವಾಗಿ ಇದನ್ನು ಮಾಡಿಬಿಟ್ಟರಾಯಿತು ಎಂಬುದು ಸರಿಯಲ್ಲ. ಈಗ ಈ ಕಾನೂನು ತರುವುದಕ್ಕೆ ಕಾಲ ಪರಿಪಕ್ವವಾಗಿದೆಯೇ? ಖಂಡಿತವಾಗಿ ಕಾಲ ಪರಿಪಕ್ವವಾಗಿಲ್ಲ. ಈಗ ಕಾನೂನು ಮಾಡುವುದು ಸರಿಯಾಗಿಲ್ಲವಾದ್ದರಿಂದ ತೀವ್ರವಾಗಿ ಸರಕಾರದವರು ಈ ಬಗ್ಗೆ ಯೋಚನೆ ಮಾಡಬೇಕು. ಇವೊತ್ತಿನ ದಿವಸ ನಾವೆಲ್ಲರೂ ಪ್ರಜಾ ಪ್ರಭುತ್ವ ಎಂಬ ಒಂದು ಶಬ್ದವನ್ನು ಕವಿಯಿಂದ ತುಂಬ ಕೇಳುತ್ತಿದ್ದೇವೆ. ಹಾಗಾದರೆ ಪ್ರಜಾ ಪ್ರಭುತ್ವಕ್ಕೆ ಸುನ್ನಣಿಯಿತ್ತು ಕೆಲಸಮಾಡುವುದಾಧರೆ, ಪ್ರಜಾಪ್ರಭುತ್ವಕ್ಕೆ ಗೌರವ ಕೊಡುವದಾದರೆ, ಜನತೆಯನ್ನು ಕಷ್ಟದಲ್ಲಿ ಸಿಕ್ಕಿಹಾಕುವಂತೆ ಒಂದು ಕಾನೂನು ಮಾಡುವುದು ಸರಿಯಲ್ಲ. ಈಗಾಗಲೇ ಜಾರಿಯಲ್ಲಿ ಬಂಬರುವ ಹೊಸನಾಣ್ಯಪದ್ಧತಿಯಿಂದ ತೊಂದರೆಯುಂಟಾಗಿದೆ. ಈ ಹೊಸತೂಕ ಅಳತೆಯ ಪದ್ಧತಿಯಿಂದ ಇನ್ನೂ ಹೆಚ್ಚು ಕಷ್ಟ ಉದ್ಭವಿಸುತ್ತದೆ. ರಾಜ್ಯದಲ್ಲಿ ನಾನಾಕಡೆ ನಾನಾ ಬಗೆಯ ತೂಕ ಮತ್ತು ಅಳತೆ ಪದ್ಧತಿಗಳಿವೆ. ಅವನ್ನೇ ಜನರು ಅರ್ಥಮಾಡಿಕೊಂಡಿಲ್ಲ. ಈಗ ಇದನ್ನು ತಂದು ಅವರಿಗೆ ತೊಂದರೆಯನ್ನುಂಟು ಮಾಡುವುದು ಸರಿಯಲ್ಲ. ಆದುದರಿಂದ ಇನ್ನೂ ಕೆಲವು ಕಾಲದವರೆಗೆ ಈ ಮಸೂದೆಯನ್ನು ತಡೆಹಿಡಿಯಬೇಕು. ಸರಕಾರದವರು ಈ ಕಾನೂನನ್ನು ತೆಗೆದುಕೊಂಡುಬಂದು ಸಮನ್ವಯ ಮಾಡುತ್ತೇವೆಂದು ಹೇಳುವುದು ಸರಿಯಾಗಿಲ್ಲ. ಸಮನ್ವಯ ಮಾಡುವುದಕ್ಕೆ ಇಮ್ಮೂಬೇರೆ ಅನೇಕ ಒಳ್ಳೊಳ್ಳೆಯ ಕಾನೂನುಗಳು ಇವೆ. ಪಿಜನ್ ಹೋಲ್‌ನಲ್ಲಿ ಯಾವ ಮಸೂದೆಗಳನ್ನು, ಕೋಲ್ಡ್ ಸ್ಟೋರೇಜ್‌ನಲ್ಲಿಪೆಯೋ ಆ ಮಸೂದೆಗಳನ್ನು ಮಂಡಿಸಬೇಕು. ಕೇಂದ್ರದ ಆದೇಶವಿದ್ದರೂ ಸಹ ಈ ಕಾನೂನಿಗೆ ಕೈಹಚ್ಚಬಾರದು. ಏಕೆಂದರೆ ಇದು ದೇಶದ ಪ್ರಗತಿಗೆ ವಿರೋಧವಾಗಿದೆ, ಪ್ರತಿಗಾಮೀ ಸ್ವರೂಪದ್ದಾಗಿದೆ. ಶಾಸನ ಕಡಿತದಿಂದ ಕಾನೂನು ಮಾಡುವುದಕ್ಕೆ ಪ್ರಯತ್ನಮಾಡಬಾರದು. ಮತ್ತು ಜನತೆಯ ಮೇಲೆ ಹೇರಬಾರದು. ಈಗಲೇ ಈ ಕಾನೂನನ್ನು ಮಾಡಿಯೇ ತೀರಬೇಕೆಂದು ಕೇಂದ್ರ ಸರಕಾರದ ಆದೇಶವೇನೂ ಇರುವುದಿಲ್ಲ, ಜಾರಿಗೆ ತರುವುದನ್ನು